



## ಗರಡಿ ಮನೇಲಿ ಸುದೀಪ್

ನಿರ್ದೇಶಕ ಕೃಷ್ಣ ತಮ್ಮ ಚಿತ್ರದ ನಾಯಕರನ್ನು ವಿಭಿನ್ನ ಪೋಷಾಕುಗಳಲ್ಲಿ ತೋರಿಸುವಲ್ಲಿ ಸಿದ್ಧಹಸ್ತರು. 'ಗಜಕೇಸರಿ' ಚಿತ್ರದಲ್ಲಿ ಯಶ್ ಅವರನ್ನು ಸಾಮ್ರಾಜ್ಯ ಹಾಗೂ ಕಾಡನ್ನು ಕಾಯುವ ವೀರ ಯೋಧನನ್ನಾಗಿ ಚಿತ್ರಿಸಿದ್ದ ಅವರು, 'ಹೆಬ್ಬುಲಿ'ಯಲ್ಲಿ ಸುದೀಪ್‌ಗೆ ಸೇನಾ ಅಧಿಕಾರಿಯ ಸಮವಸ್ತ್ರ ತೊಡಿಸಿದ್ದರು. ಈಗವರು ಸುದೀಪರನ್ನು ಗರಡಿಮನೆಯ ಮಣ್ಣಿನಂಗಳಕ್ಕೆ ಕರೆದಿದ್ದಾರೆ.

ಚಿತ್ರದ ಹೆಸರು ಪೈಲ್ವಾನ. ಗಾಂಧಿ ನಗರಕ್ಕೆ ಗರಡಿ ಮನೆಗಳೂ ಉಸ್ತಾದರೂ ಹೊಸತಲ್ಲ. ಆದರೆ ಗರಡಿಪಟುವಿನ ಬದುಕನ್ನೇ ಪೂರ್ಣವಾಗಿ ಬಳಸಿಕೊಂಡು ರೂಪುಗೊಳ್ಳುತ್ತಿರುವ ಸಿನಿಮಾ 'ಪೈಲ್ವಾನ'. ಕಳೆದ ವಾರ ಸುದೀಪ್ ಹುಟ್ಟುಹಬ್ಬದ ಸಂದರ್ಭದಲ್ಲಿ ಚಿತ್ರದ ಪ್ರಕಟಣೆ ಹೊರಬಿದ್ದಿದೆ.

'ಪೈಲ್ವಾನ' ಚಿತ್ರಕ್ಕೆ ನಿರ್ದೇಶಕರು ಸಾಕಷ್ಟು ಸಿದ್ಧತೆ ನಡೆಸಿದ್ದಾರೆ. ದಾವಣಗೆರೆ, ವಿಜಯಪುರ, ಬಾಗಲಕೋಟೆಗಳಲ್ಲಿ ಸಿನಿಮಾದ ಚಿತ್ರೀಕರಣ ನಡೆಯಲಿದೆ. ಪೈಲ್ವಾನನೊಬ್ಬ ತನ್ನ ಜೀವನದಲ್ಲಿ ಸಿಕ್ಕ ಎರಡನೇ ಅವಕಾಶವನ್ನು ಹೇಗೆ ಯಶಸ್ವಿಪಡಿಸಿಕೊಳ್ಳುತ್ತಾನೆ ಎನ್ನುವುದು ಚಿತ್ರದ ಕಥೆ.

'ಪೈಲ್ವಾನ' ಒಂದರ್ಥದಲ್ಲಿ ಕೌಟುಂಬಿಕ ಸಿನಿಮಾ. ಚಿತ್ರದ ಕಥೆ ಕೃಷ್ಣ ಅವರ ಪತ್ನಿಯದು. ಛಾಯಾಗ್ರಹಣ, ನಿರ್ದೇಶನದ ಜೊತೆಗೆ ಕೃಷ್ಣ ಅವರು ಪತ್ನಿಯೊಂದಿಗೆ ಚಿತ್ರದ ನಿರ್ಮಾಣದ ಜವಾಬ್ದಾರಿಯನ್ನೂ ವಹಿಸಿಕೊಂಡಿದ್ದಾರೆ. ಕೃಷ್ಣ ಅವರು ಸುದೀಪ್‌ರ ಆಪ್ತವಲಯದಲ್ಲಿ ಗುರ್ತಿಸಿಕೊಂಡವರು. ಹೊಸ ಬಗೆಯ ಪಾತ್ರದಲ್ಲಿ ತಮ್ಮನ್ನು ಕಾಣಿಸುವ ಗೆಳೆಯನ ಉಮೇದು ಚಿತ್ರದ ಕುರಿತು ಸುದೀಪ್‌ರಲ್ಲಿ ಹೊಸ ಹುಮ್ಮಸ್ಸು ಮೂಡಿಸಿದೆಯಂತೆ.

## ಬೆಳ್ಳಿತೆರೆಯತ್ತ ಹಂಸ!

'ಒಂದು ಒಳ್ಳೆಯ ಸಿನಿಮಾಕ್ಕೆ ಏನೆಲ್ಲ ಬೇಕು, ಅದೆಲ್ಲವೂ ನಮ್ಮ ಸಿನಿಮಾದಲ್ಲಿದೆ'. ಇದು 'ರಾಜಹಂಸ' ಸಿನಿಮಾದ ಬಗ್ಗೆ ನಿರ್ದೇಶಕ ಜಡೇಶ್‌ಕುಮಾರ್ ಅವರ ಆತ್ಮವಿಶ್ವಾಸದ ಮಾತು.

ಚಿತ್ರಮಂದಿರಗಳ ಹೊಸ್ತಿಲಲ್ಲಿರುವ (ಸೆ. 8ರಂದು ತೆರೆಗೆ) 'ರಾಜಹಂಸ' ಅನೇಕ ಹೊಸಪ್ರತಿಭೆಗಳ ಸಮ್ಮಿಲನದ ಸಿನಿಮಾ. ಕಿರುತೆರೆಯ 'ಪುಟ್ಟಗೌರಿ ಮದುವೆ' ಸೀರಿಯಲ್ ಖ್ಯಾತಿಯ ರಂಜಿನಿ ರಾಘವನ್ ಚಿತ್ರದಲ್ಲಿರುವ ಪರಿಚಿತ ಮುಖ. ಗೌರಿಶಿಖರ್ ಚಿತ್ರದ ನಾಯಕ. ಅವರು ಸಿನಿಮಾದ ನಿರ್ಮಾಪಕರೂ ಹೌದು. ಚಿತ್ರದಲ್ಲಿ ಅವರದು ಹಾಡಿ ಕುಣಿಯುವ ಹುಡುಗಾಟದ ಹುಡುಗನ ಪಾತ್ರ. ನಾಯಕಿ ಕೂಡ ಆಧುನಿಕ ನಡೆ–ನುಡಿಯ ಯುವತಿ.

ರಂಜಿನಿ–ಗೌರಿ ಜೋಡಿ ಉತ್ಸಾಹದಿಂದ ನಟಿಸಿದ್ದು, ತಮ್ಮ ಚಿತ್ರವನ್ನು ಪ್ರೇಕ್ಷಕರು ಮೆಚ್ಚಿಕೊಳ್ಳಲಿದ್ದಾರೆ ಎಂದು ನಿರ್ದೇಶಕರು ವಿಶ್ವಾಸದಿಂದ ಹೇಳುತ್ತಾರೆ. ಅವರ ವಿಶ್ವಾಸಕ್ಕೆ ಕಾರಣ ಚಿತ್ರದ ಕಥೆ. ದೇಶ ಸುತ್ತುವ ಖಯಾಲಿಯ ಚಿತ್ರದ ನಾಯಕನಿಗೆ, ತಾನು ಭೇಟಿಯಾಗುವ ವ್ಯಕ್ತಿಗಳೊಂದಿಗೆ ಕಾಫಿ ಕುಡಿಯುತ್ತ ಸೆಲ್ಫಿ ತೆಗೆದುಕೊಳ್ಳುವ ಅಭ್ಯಾಸ. ಈ ಕಥೆಯೊಂದಿಗೆ ನೋಡುಗರು ತಮ್ಮನ್ನು ಗುರ್ತಿಸಿಕೊಳ್ಳಲಿದ್ದಾರಂತೆ.

ಶ್ರೀಧರ್ ಜೋಶ್ವಾ ಸಂಗೀತ ಸಂಯೋಜನೆಯ ಗೀತೆಗಳು ಜನಪ್ರಿಯಗೊಂಡಿವೆ. ಡಾ. ಶ್ರೀಧರ್, ಬಿ.ಸಿ. ಪಾಟೀಲ್, ಬುಲೆಟ್ ಪ್ರಕಾಶ್ ಹಾಗೂ ರಾಜು ತಾಳಿಕೋಟೆ ತಾರಾಗಣದಲ್ಲಿರುವ ಪ್ರಮುಖರು. 'ಚಿನ್ನ' ಚಿತ್ರದಲ್ಲಿ ರವಿಚಂದ್ರನ್‌ಗೆ ಜೋಡಿಯಾಗಿ ನಟಿಸಿದ್ದ ಯಮುನಾ, ಬಹುದಿನಗಳ ನಂತರ 'ರಾಜಹಂಸ' ಮೂಲಕ ಕನ್ನಡ ಪ್ರೇಕ್ಷಕರ ಎದುರು ಬರುತ್ತಿದ್ದಾರೆ.